# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 680 |
| ಉತ್ತರಿಸುವ ದಿನಾಂಕ | 12-07-2023 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿನ ಸಬ್ ರಿಜಿಸ್ಟ್ರಾರ್ (ಉಪ ನೋಂದಣಾಧಿಕಾರಿ) ಕಛೇರಿಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ಇಲಾಖೆಯಲ್ಲಿ "ಕಾವೇರಿ-2.0" ತಂತ್ರಾಂಶವನ್ನು ರಾಜ್ಯವ್ಯಾಪ್ತಿ ಉಪ ನೋಂದಣಿ ಕಛೇರಿಗಳಲ್ಲಿ ಅಳವಡಿಸಿದ್ದು, ಸಾರ್ವಜನಿಕರು ತಮ್ಮ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ದರ (Guidance Value) ಅಥವಾ ಮಾರುಕಟ್ಟೆ (Market Value) ದರಗಳಂತೆ ಸಂಬಂದಿಸಿದ ಉಪ ನೋಂದಣಾಧಿಕಾರಿಗಳಿಗೆ Online ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಇದರಿಂದ ಸಾರ್ವಜನಿಕರು ನೇರವಾಗಿ ಸರ್ಕಾರದ ಖಜಾನೆಗೆ ಹಣ ಪಾವತಿಸಲು ಅವಕಾಶ ಕಲ್ಪಿಸಲಾಗಿದ್ದು, ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ಭೌತಿಕ ಹಣ ವಹಿವಾಟು ತಡೆಗಟ್ಟಲಾಗಿರುವುದರಿಂದ ಉಪ ನೋಂದಣಿ ಕಛೇರಿಗಳಲ್ಲಿ ನಗದು ವಹಿವಾಟು ನಿಲ್ಲಿಸಲಾಗಿದೆ.<br>ಇಲಾಖೆಯಲ್ಲಿ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಲು ಶುಲ್ಕ ಪಾವತಿ ಹಾಗೂ ದಾಖಲೆಗಳನ್ನು Online ಮುಖಾಂತರ ಸಲ್ಲಿಸಲು ನಾಗರಿಕರಿಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br>ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಉಪ ನೋಂದಣಿ ಕಚೇರಿಗಳಲ್ಲಿ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. |
| ಆ | ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಉಪ ನೋಂದಣಾಧಿಕಾರಿಗಳ ಕಛೇರಿಗಳು ಎಷ್ಟು; | ಉಪ ನೋಂದಣಿ ಕಛೇರಿಗಳ ಸಂಖ್ಯೆ: 07 |

| | | |
|---|---|---|
| ಇ | ಈ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳೂ (ಸಬ್‌ರಿಜಿಸ್ಟ್ರಾರ್ ಅಧಿಕಾರಿ ಸೇರಿದಂತೆ) ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂಧಿಗಳ ಸಂಪೂರ್ಣ ವಿವರನ್ನು ದಿನಾಂಕಗಳ ಸಮೇತ ನೀಡುವುದು; | ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಈ | ಸದರಿ ಕಛೇರಿಗಳ ಸಿಬ್ಬಂದಿಗಳ ವಿರುದ್ಧ ಕಳೆದ 4 ವರ್ಷಗಳಲ್ಲಿ ದಾಖಲಾದ ಭ್ರಷ್ಟಾಚಾರ ಪ್ರಕರಣಗಳು ಎಷ್ಟು; ಅವು ಯಾವುವು; ಭ್ರಷ್ಟಾಚಾರದಲ್ಲಿ ಭಾಗಿಯಾದ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; | ಕಳೆದ-4 ವರ್ಷಗಳಲ್ಲಿ ದಾಖಲಾದ ಭ್ರಷ್ಟಾಚಾರ ಪ್ರಕರಣಗಳ ಸಂಖ್ಯೆ:1<br>ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ. |
| ಉ | ಕಳೆದ ಹಲವಾರು ವರ್ಷಗಳಿಂದ ಒಂದೇಕಡೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ/ಅಧಿಕಾರಿಗಳನ್ನು ಬೇರೆ ಸ್ಥಳಗಳಿಗೆ ವರ್ಗಾವಣೆ ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕ್ರಮ ಕೈಗೊಳ್ಳಲಾಗುವುದು? (ಸಂಪೂರ್ಣ ವಿವರ ನೀಡುವುದು) | ಸರ್ಕಾರಿ ನೌಕರರ ವರ್ಗಾವಣಾ ಮಾರ್ಗಸೂಚಿಗಳನ್ವಯ ಅದಿಕಾರಿ/ ಸಿಬ್ಬಂದಿಗಳ ವರ್ಗಾವಣೆ ಪ್ರಕ್ರಿಯೆಯನ್ನು ನಿಯಮಾನುಸಾರ ಕೈಗೊಳ್ಳಲಾಗುತ್ತಿದೆ. |

ಕಂಇ/128/ಎಂಎನ್‌ಎಸ್‌ಎ/2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ–1

## ಕಲಬುರ್ಗಿ ಜಿಲ್ಲಾ ವ್ಯಾಪ್ತಿಯ ಉಪನೋಂದಣಿ ಕಛೇರಿಗಳ ಅಧಿಕಾರಿಗಳ / ಸಿಬ್ಬಂದಿಗಳ ವಿವರ

| ಕ್ರ.ಸಂ | ಕಛೇರಿಯ ಹೆಸರು | ಹೆಸರು/ಹುದ್ದೆ | ಕಾರ್ಯನಿರ್ವಹಿಸುತ್ತಿರುವ ದಿನಾಂಕ |
|---|---|---|---|
| 1 | ಉಪನೋಂದಣಾಧಿಕಾರಿಗಳ ಕಛೇರಿ, ಕಲಬುರಗಿ | ಶ್ರೀ ಚಂದ್ರಕಾಂತ ಶಿಕಾರಿ, ಹಿರಿಯ ಉಪನೋಂದಣಾಧಿಕಾರಿಗಳು | 27-06-2022 |
| | | ಶ್ರೀ ಬಿ.ಶ್ರೀಕಾಂತ, ಹೆಚ್ಚುವರಿ ಉಪನೋಂದಣಾಧಿಕಾರಿಗಳು | 15-07-2019 |
| | | ಶ್ರೀ ಸತೀಶ ಕುಮಾರ ಬಿ.ಬುಕ್ಕನ್, ಪ್ರಥಮ ದರ್ಜೆ ಸಹಾಯಕರು | 15-07-2020 |
| | | ಶ್ರೀ ಪರಸಪ್ಪ, ದ್ವಿತೀಯ ದರ್ಜೆ ಸಹಾಯಕರು | 16-08-2020 |
| | | ಶ್ರೀ ಶಿವಶರಣ ಅಂಬಲಗಿ, ದ್ವಿತೀಯ ದರ್ಜೆ ಸಹಾಯಕರು | 11-11-2021 |
| | | ಶ್ರೀಮತಿ ಪುಣ್ಯವತಿ, ದ್ವಿತೀಯ ದರ್ಜೆ ಸಹಾಯಕರು | 30-07-2021 |
| 2 | ಉಪನೋಂದಣಾಧಿಕಾರಿಗಳ ಕಛೇರಿ, ಆಳಂದ | ಉಪನೋಂದಣಾಧಿಕಾರಿಗಳ ಖಾಲಿ ಹುದ್ದೆಗೆ ಶ್ರೀಮತಿ ಶೃತಿ. ಪ್ರಥಮ ದರ್ಜೆ ಸಹಾಯಕರು. ಪ್ರಭಾರದಲ್ಲಿರುತ್ತಾರೆ. | ಖಾಲಿ<br>28-06-2023 |
| | | ಶ್ರೀಮತಿ ಶೃತಿ, ಪ್ರಥಮ ದರ್ಜೆ ಸಹಾಯಕರು, | 30-07-2020 |

| | | | |
|---|---|---|---|
| 3 | ಉಪನೋಂದಣಾಧಿಕಾರಿಗಳ ಕಛೇರಿ, ಅಫ್‌ಜಲಪುರ | ಶ್ರೀಮತಿ ಅನುರಾಧಾ ಎಂ.ಕಿನ್ನಾಳ, ಹಿರಿಯ ಉಪನೋಂದಣಾಧಿಕಾರಿಗಳು | 11-04-2023 |
| | | ಶ್ರೀ ಜಯಪುತ್ರ, ದ್ವಿತೀಯ ದರ್ಜೆ ಸಹಾಯಕರು | 02-07-2019 |
| 4 | ಉಪನೋಂದಣಾಧಿಕಾರಿಗಳ ಕಛೇರಿ, ಜೇವರ್ಗಿ | ಶ್ರೀ ಪುಟ್ಟನಾಯಕ, ಉಪನೋಂದಣಾಧಿಕಾರಿಗಳು | 10-01-2021 |
| | | ಶ್ರೀಮತಿ ಶೋಭಾ ಜೆ. ದ್ವಿತೀಯ ದರ್ಜೆ ಸಹಾಯಕರು | 02-12-2022 |
| 5 | ಉಪನೋಂದಣಾಧಿಕಾರಿಗಳ ಕಛೇರಿ, ಚಿತ್ತಾಪುರ | ಶ್ರೀಮತಿ ರೈಯೀಸ್ ಫಾತಿಮಾ. ಉಪನೋಂದಣಾಧಿಕಾರಿಗಳು | 30-07-2019 |
| | | ಶ್ರೀ ನಿಂಗಪ್ಪ, ಪ್ರಥಮ ದರ್ಜೆ ಸಹಾಯಕರು | 23-07-2021 |
| 6 | ಉಪನೋಂದಣಾಧಿಕಾರಿಗಳ ಕಛೇರಿ, ಸೇಡಂ | ಉಪನೋಂದಣಾಧಿಕಾರಿಗಳ ಖಾಲಿ ಹುದ್ದೆಗೆ ಶ್ರೀ ಅಶೋಕ ನರಬೋಳ, ದ್ವಿತೀಯ ದರ್ಜೆ ಸಹಾಯಕರು ಪ್ರಭಾರದಲ್ಲಿರುತ್ತಾರೆ. | ಖಾಲಿ<br>30-06-2023 |
| | | ಶ್ರೀ ಅಶೋಕ ನರಬೋಳ, ದ್ವಿತೀಯ ದರ್ಜೆ ಸಹಾಯಕರು | 12-11-2021 |
| 7 | ಉಪನೋಂದಣಾಧಿಕಾರಿಗಳ ಕಛೇರಿ, ಚಿಂಚೋಳಿ | ಶ್ರೀ ವಿಠ್ಠಲ ಕುಂಬಾರ, ಉಪನೋಂದಣಾಧಿಕಾರಿಗಳು | 19-07-2021 |

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು

ಅನುಬಂಧ-2

## (ಈ) ಕಲಬುರ್ಗಿ ಜಿಲ್ಲಾ ವ್ಯಾಪ್ತಿಯ ಉಪನೋಂದಣಿ ಕಛೇರಿಗಳ ಸಿಬ್ಬಂದಿಗಳ ವಿರುದ್ಧ ಕಳೆದ 4 ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣದ ವಿವರ ಈ ಕೆಳಕಂಡಂತಿದೆ:

| ಕ್ರಸಂ | ಉಪನೋಂದಣಾಧಿಕಾರಿಗಳ ಹೆಸರು ಮತ್ತು ಹುದ್ದೆ | ಉಪನೋಂದಣಿ ಕಛೇರಿ | ಭ್ರಷ್ಟಾಚಾರ ನಿಗ್ರಹದಳ ಪ್ರಕರಣದ ವಿವರ (ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಅಪರಾಧ ಸಂಖ್ಯೆ ಹಾಗೂ ಕಲಂ) | ಕೈಗೊಂಡ ಕ್ರಮ |
|---|---|---|---|---|
| 1 | 2 | 3 | 4 | 5 |
| 1 | ಶ್ರೀ ಎಂ.ಎ.ಹಸೀಬ್, ಹೆಚ್ಚುವರಿ ಉಪನೋಂದಣಾಧಿಕಾರಿಗಳು , | ಕಲಬುರ್ಗಿ | ಸದರಿಯವರು ಕಲಬುರ್ಗಿ ಉಪನೋಂದಣಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರ ವಿರುದ್ಧ ಲಂಚದ ಪ್ರಕರಣದ ಹಿನ್ನೆಲೆಯಲ್ಲಿ ಕಲಬುರ್ಗಿ ಭ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಠಾಣೆ ಇಲ್ಲಿ ಮೊ.ನಂ.02/2019 ಕಲಂ 7(a), 7(A) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ದಿನಾಂಕ:09-05-2019ರಲ್ಲಿ ದಾಖಲಾಗಿರುತ್ತದೆ. | ಈ ಶಿಕ್ಷಾರ್ಹ ಅಪರಾಧಕ್ಕಾಗಿ ಸದರಿಯವರನ್ನು ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ರವರ ಪತ್ರಸಂಖ್ಯೆ:ಎಸಿಬಿ/ಕೇಂ.ಕ/ಕಲಬುರ್ಗಿ/ಮೊ.ಸಂ./02/2019 ದಿನಾಂಕ:05-08-2020 ರಲ್ಲಿ ಅಭಿಯೋಜನೆಗೊಳಪಡಿಸಲು ಭ್ರಷ್ಟಾಚಾರ ಪ್ರತಿಬಂಧಕಕಾಯ್ದೆ 1988 ರ ಕಲಂ 19(1)(ಸಿ) ರನ್ವಯ ಮಂಜೂರಾತಿ ನೀಡಲು ಕೋರಿರುತ್ತಾರೆ.<br><br>ಸದರಿಯವರು ಗ್ರೂಪ್ 'ಎ' ವೃಂದದ ಅಧಿಕಾರಿಯಾಗಿದ್ದು, ಸರ್ಕಾರವು ಸಕ್ಷಮ ಪ್ರಾಧಿಕಾರಿಯಾಗಿರುವುದರಿಂದ ಸದರಿಯವರನ್ನು ಭ್ರಷ್ಟಾಚಾರ ಪ್ರತಿಬಂಧಕಕಾಯ್ದೆ 1988 ರ ಕಲಂ 19(1)(ಸಿ) ರನ್ವಯ ಅಭಿಯೋಜನಗೊಳಪಡಿಸುವಂತೆ ಸರ್ಕಾರಕ್ಕೆ ದಿನಾಂಕ:20-08-2020 ರಲ್ಲಿ ಕೋರಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ:ಕಂಇ 9 ಮುನೋಸೇ(1) 2020 ಬೆಂಗಳೂರು ದಿನಾಂಕ:08-09-2021 ರಲ್ಲಿ ಸದರಿಯವರ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕಕಾಯ್ದೆ 1988 ರ ಕಲಂ 19(1)(ಸಿ) ರನ್ವಯ ಅಭಿಯೋಜನಾ ಮಂಜೂರಾತಿ ಆದೇಶವನ್ನು ಭ್ರಷ್ಟಾಚಾರ ನಿಗ್ರಹದಳ ಕಲಬುರ್ಗಿ ಇವರಿಗೆ ನೀಡಲಾಗಿದೆ. |

Inspector General of Registration
and Commissioner of Stamps